ಚನ್ನಂಗಿದುರ್ಗ ಶಿವರಾತ್ರಿ ಹಬ್ಬಕ್ಕೆ ಸಿಂಗರಿಸಿಕೊಂಡು ಸಿದ್ಧವಾಗಿತ್ತು. ಜೋಳ ಅವಲಾಗಿ ಬೆಲ್ಲ ಪಾನಕವಾಗಿ; ನೆಂಟಸ್ಥನ ಬೆಳೆಸಿ ಹುರಿಟ್ಟಿನ ಉಂಡೆಗಳಾದವು. ಶಿವರಾತ್ರಿ ಒಂದತ್ತೆಂದು ಹಿಟ್ಟೊತ್ತಾದರೂ ಹಸಿದೊಟ್ಟೆ ಉರಿಟ್ಟಿಗಾಗಿ ಕಾದಿತ್ತು. ಹೊತ್ತು ನೆತ್ತಿಗೇರಿ ಉರಿಟ್ಟಿನುಂಡೆ ಕಾದು ಕುಂತ ಹೊಟ್ಟೆ ಸೇರಿತು. ಅದರಿಂದೆ ಅಂಬರದಲ್ಲಿ ಹಾರಾಡುವ ಹಣ್ಣು ಅಂಗಿ ಬಿಚ್ಚಿಸಿಕೊಂಡು ಹೊರಟು ಹುರಿಟ್ಟಿನ ಜೊತೆ ಸೇರಿಕೊಂಡಿತು. ಒಂದತ್ತೆಂದ ಹೊಟ್ಟೆ ಪ್ರತಿದಿನಕ್ಕಿಂತ ಕೊಂಚ ಹೆಚ್ಚಿಗೆ ತೇಗಿತ್ತು. ಮದ್ದೆಮ್ಮ, ಈರಕ್ಯಾತರಾಯನ ಗುಟ್ಟೆ ಬೆಟ್ಟಗಳ ಮರದ ಮೈ ತುಂಬ ಅರಳಿ ನಿಂತಿದ್ದ ಜಾಲಗಿರಿ ಹೂ; ಪ್ರತಿ ಮನೆ ಮುಂದೆ ನಿಂತು ಮಾರಿಸಿಕೊಂಡು ಗಮಲು ಹರಡಿತು. ದಾಸೇಗೌಡರ ತೋಟದ ಅಗ್ರದೆಲೆಯುಳ್ಳ ಬಾಳೆ ಕಂದು, ಚಿಕ್ಕಮ್ಮಜ್ಜಿ ಕಸಿ ಮಾವಿನ ಮರದಲ್ಲಿ ಚಿಗುರಿ ನಳ ನಳಿಸುತ್ತಿದ್ದ ಸೊಪ್ಪು; ಜೊತೆಯಾಗಿ ಆತು ನಿಂತ ಊರುಗೋಲಿಗೆ ನೆಲ್ಲುಲ್ಲಿನ ಹಗ್ಗದೊಂದಿಗೆ ಸುತ್ತಿಕೊಂಡು ಬೀದಿ ಅಲಂಕಾರಗೊಂಡಿತು. ವಯಸ್ಸಾಗಿ ನೆಲಕ್ಕುರುಳಿದ ನಾಲ್ಕು ಅಡಿಕೆ ಮರ ನಡು ರಸ್ತೆಯಲ್ಲಿ ಕತ್ತೆತ್ತಿ ನಿಂತು; ಅಡ್ಡ ಮಲಗಿದ ಬಿದ್ರಗಳಿನ ಮೇಲೆ ತೆಂಗಿನ ಗರಿ ಎಳೆದುಕೊಂಡು ರಂಗಸ್ಥಲವಾಯಿತು.

ಚನ್ನಂಗಿದುರ್ಗದ ದಕ್ಷಿಣಕ್ಕೆ ಕಮಲಪುರ ಮೂಲಕ ಬೆಟ್ಟಸಾಲು ದಾಟಿ ನಡೆದರೆ ಟುಮಕಿಪುರದ ಪೂರ್ವಕ್ಕೆ ಸಿದ್ದರು ಕಟ್ಟಿದ ಗಂಗಾಮಠವಿದೆ. ಮಠದ ಅಧಿಪತಿ ಭಕ್ತಿ ಭಂಡಾರಕ್ಕೆ ಹೆಸರುವಾಸಿ. ಹುಲುಮಾನವರ ಮೇಲೆ ಆರೋಪಗಳಿದ್ದಂತೆ ಅವರ ಮೇಲೂ ಆರೋಪಗಳಿವೆ. ಮಠಾಧಿಪತಿ ಆಪಾದನೆಗೆ ಅಂಜಿ ಕೂರದೆ ಟುಮಕಿಪುರದ ಮಂಡಿಪೇಟೆಯಲ್ಲಿ ಜೋಳಿಗೆಯೊಡ್ಡಿ ಭಿಕ್ಷೆ ಬೇಡಿ; ಜಾತಿ ಭೇದವೆಣಿಸದೆ ಬಡ ಮಕ್ಕಳ ಕೈ ಹಿಡಿದು ಕರೆ ತಂದು ಮಠಕ್ಕೆ ಸೇರಿಸಿ; ಹೊಟ್ಟೆ ತುಂಬ ತುತ್ತು, ಎದೆ ತುಂಬ ಅಕ್ಷರ ಬೀಜ ಬಿತ್ತಿ ಪುಣ್ಯಾತ್ಮರಾದವರು. ಊರು ಸಿಂಗರಿಸಿರುವುದು ಇಂದು ಆ ಪುಣ್ಯಾತ್ಮರ ಬರಮಾಡಿಕೊಳ್ಳಲು. ಅವರ ಅಮೃತಹಸ್ತದಿಂದ ಊರಿಗೆ ಹೊಸದಾಗಿ ಮುಂಜೂರಾದ ಬೀದಿ ದೀಪ ಹಚ್ಚುವ ಕಾರ್ಯಕ್ರಮ ಉದ್ಘಾಟಿಸಲು. ಮೇಲು ಕೀಳೆನ್ನದೆ ಊರ ಜನ ಪುಣ್ಯಾತ್ಮರ ಎದುರುಗೊಂಡು, ಪುಣ್ಯ ಕಟ್ಟಿಕೊಳ್ಳಲು

